ಅಧ್ಯಕ್ಷರು:- ಸ್ವಲ್ಪ ಕೇಳಿ. ಮಾನ್ಯ ಸದಸ್ಯರು ಖಾಸಗಿ ಕಾರ್ಯಕಲಾಪದ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಉತ್ತರ ಹೇಳುತ್ತೇನೆ. ಆಮೇಲೆ ತಮ್ಮದು ಯಾವುದಾದರೂ ಬಾಕಿ ಇದ್ದರೆ ಅದನ್ನು ವಿಚಾರ ಮಾಡೋಣ. ಮೊನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಕಾವೇರಿ ವಿಷಯದ ಬಗ್ಗೆ ಚರ್ಚೆ ನಡೆದ ಸಂಬಂಧದಲ್ಲಿ ಇವತ್ತಿನ ಖಾಸಗಿ ಕಾರ್ಯಕಲಾಪಗಳನ್ನು ಮುಂದೆ ಹಾಕಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದರಿಂದ ಇವತ್ತು ನಾವು ಕಾವೇರಿ ವಿಷಯದ ಬಗ್ಗೆ ಚರ್ಚೆಮಾಡಿ, ಮಧ್ಯಾಹ್ನ ಪ್ರಶ್ನೋತ್ತರ ಇವನ್ನೆಲ್ಲಾ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಏಕಾಂತಯ್ಯ:- ತಾವು ಖಾಸಗಿ ಕಾರ್ಯಕಲಾಪಗಳನ್ನು ಸಲಹಾ ಸಮಿತಿಯ ಆದೇಶದ ಮೇರೆಗೆ ತೆಗೆದುಕೊಳ್ಳಬೇಕಾಗಿಲ್ಲ. ಇದಕ್ಕೆ ನಾವು ಪ್ರತ್ಯೇಕ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನಿಯಮಗಳಲ್ಲಿ 239 ಏನಿದೆ ಅದು ಸಮಿತಿಯ ರಚನೆ ಇರಬಹುದು, 241ರಲ್ಲಿ ಸಮಿತಿಯ ಪ್ರಕಾರಗಳು, ಫಂಕ್ಷನ್ಸ್ ಏನಿವೆ, ಅದರಲ್ಲಿ ಅವರಿಗೆ ಅಧಿಕಾರವನ್ನು ಕೊಟ್ಟಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಇದರಿಂದ ಹೊರತಾದ ಬಿಸಿನೆಸ್‌ನ್ನು ನಿಗದಿ ಮಾಡುವುದಕ್ಕೆ ಮಾತ್ರ ಅಧಿಕಾರ ಇದೆಯೇ ಹೊರತಾಗಿ ಖಾಸಗಿ ಕಾರ್ಯಕಲಾಪಗಳನ್ನು ನಿಗದಿ ಮಾಡುವಂಥ ಅಧಿಕಾರ ಈ ನಿಯಮಗಳ ಪ್ರಕಾರ ಇಲ್ಲ. ನಾನು ಅದರ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಆ ಅಧಿಕಾರ ಇದೆಯೇ ಇಲ್ಲವೇ? ಇಲ್ಲದೇ ಇದ್ದರೆ ಇವತ್ತಿನ ದಿವಸ ತಪ್ಪಾಗದ ರೀತಿಯಲ್ಲಿ ಏನಾದರೂ ಸರ್ಕಾರ ಮತ್ತು ತಮ್ಮ ಸಚಿವಾಲಯ ನೋಡಿಕೊಳ್ಳುತ್ತದೆಯೇ ಅಥವಾ ಇಲ್ಲವೇ?

MR.SPEAKER:- I will give my ruling. ಇನ್ನುಮುಂದೆ ಗಮನ ಸೆಳೆಯುವ ಸೂಚನೆ. ಶ್ರೀ ಬಸವರಾಜ ಪಾಟೀಲ್ ಅಟ್ಟೂರು ಅವರು....

ಶ್ರೀ ಎಂ.ಮಹದೇವ್:– ಅಧ್ಯಕ್ಷರೇ....

ಅಧ್ಯಕ್ಷರು:- ನೀವು ಕುಳಿತುಕೊಳ್ಳಿ.

ಶ್ರೀ ಎಂ.ಮಹದೇವ್:- ನಮ್ಮಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಮಳೆ ಇಲ್ಲ. ಈ ವಿಚಾರದ ಬಗ್ಗೆ ನಾನು ಮಾತನಾಡಬೇಕಾಗಿದೆ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವುದರಿಂದ ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್(ಬಸವ ಕಲ್ಯಾಣ):- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವುದರಿಂದ, ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ:-

ಶ್ರೀ ಡಿ.ಎ.ಚಿನ್ನಪ್ಪ (ಗಣಿ ಭೂ ವಿಜ್ಞಾನ ಸಚಿವರು):- ಮಾನ್ಯ ಅಧ್ಯಕ್ಷರೇ, ಸಾರಿಗೆ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಮೋಟಾರು ವಾಹನ ಕಾಯಿದೆ 1988ರ ಕಾಯಿದೆ 129ರ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ದ್ವಿಚಕ್ರ ವಾಹನಗಳನ್ನು ಓಡಿಸುವಂಥಹ ಚಾಲಕರು ಶಾಖ್ಬಿಕ ಹೆಲ್ಮೆಟ್‌ಗಳನ್ನು

ಧರಿಸತಕ್ಕುದ್ದಾಗಿರುತ್ತದೆ. ಕರ್ನಾಟಕ ಮೋಟಾರು ವಾಹನ ನಿಯಮಗಳು 1989ರ ನಿಯಮ 230ರ ಪ್ರಕಾರ ಹೆಲ್ಮೆಟ್ ಧರಿಸುವುದನ್ನು ದಿನಾಂಕ : 1:8:1993 ರಿಂದ ಕಡ್ಡಾಯಗೊಳಿಸಲಾಗಿದೆ.

ಹೆಲ್ಮೆಟ್‌ಗಳ ಬೆಲೆಗಳು ರೂ:400 ರಿಂದ 600ರ ವರೆಗೆ ಇರುತ್ತದೆ. ಇದನ್ನು ಜಾಸ್ತಿ ಮಾಡಿರುವ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂಥಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಇದು ಅಲ್ಲಿದೆ ಹೆಲ್ಮೆಟ್‌ಗಳನ್ನು ಕೊಳ್ಳಲು ಸಾರ್ವಜನಿಕರಿಗೆ ತೊಂದರೆಯುಂಟಾಗುವ ಕಾರಣದಿಂದ ಸರ್ಕಾರದ ನಿಯಮವನ್ನು ದಿನಾಂಕ:1:10:1993ರಿಂದ ಜಾರಿಗೊಳಿಸುವಂತೆ ಆದೇಶಿಸಲಾಗಿರುತ್ತದೆ. ಅಲ್ಲಿಯವರೆಗೆ ಪೋಲೀಸರಿಂದ ಕಿರುಕುಳ ಕೊಟ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಐ.ಎಸ್.ಐ.ಚಿನ್ಹೆ ಇರುವ ಹೆಲ್ಮೆಟ್‌ಗಳನ್ನು ಮಾತ್ರವೇ ಕೊಳ್ಳಬೇಕಾಗಿರುತ್ತದೆ. ಕಳಪೆ ದರ್ಜೆಯ ಹೆಲ್ಮೆಟ್‌ಗಳ ತಯಾರಿಕೆಯನ್ನು ಸರ್ಕಾರದ ಗಮನಕ್ಕೆ ಬಂದರೆ ಅವರುಗಳ ಬಗ್ಗೆಯೂ ಸಹ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಭ್ರಷ್ಟಾಚಾರ ಹಾಗೂ ಹೆಲ್ಮೆಟ್‌ಗಳ ಕಳ್ಳತನಗಳು ಪ್ರಾರಂಭವಾಗುತ್ತಿದೆ ಎಂಬುದು ಸತ್ಯಕ್ಕೆ ದೂರವಾದುದು. ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಿರುವುದರಿಂದ ವಾಹನ ಚಾಲಕರಿಗೆ ಈ ಕೆಳಕಂಡ ಕಾರಣಗಳಿಂದ ಅನಾನುಕೂಲಗಳು ಉಂಟಾಗುವುದಿಲ್ಲ.

ಪ್ರಪಂಚದಾದ್ಯಂತ ನಡೆದಿರುವ ಸಂಶೋಧನೆಯಿಂದಾಗಿ ದ್ವಿಚಕ್ರ ವಾಹನ ಚಾಲಕರಿಗೆ ಸಾಕಷ್ಟು ರಕ್ಷಣೆ ನೀಡುವುದೆಂದು ತಿಳಿದು ಬಂದಿದೆ. ಜೀವಾಣು ತಂತ್ರಸಂಶೋಧನೆಗೊಳಪಡಿಸಿ ಪುಡಿಪುಡಿಯಾಗದಂತೆ ಮತ್ತು ತಲೆಗೆ ಗಾಯಗಳಾಗದಂತೆ ವಿಶ್ಲೇಷಣೆಗೊಳಪಡಿಸಿ ನಾಬೀನ್ಯತೆಗೊಳಪಡಿಸಲಾಗಿದೆ.

ಅದು ತಲೆ ಮತ್ತು ಅಪಘಾತದಿಂದಾದ ಒತ್ತಡದ ಶಕ್ತಿಯ ನಡುವೆ ಪ್ರತಿರೋಧವೊಡ್ಡುತ್ತದೆ. ಫೈಬರ್‌ಗ್ಲಾಸ್ ಹೊರಗಿನ ಶಕ್ತಿಯ ಒತ್ತಡವನ್ನು ತಡೆಯುವ ಮತ್ತು ಹಾಗೆ ಅದನ್ನು ಒತ್ತರಿಸಿ ಹಿಡಿದು ಬೆಲ್ಲುವ ಸಾಮರ್ಥ್ಯವನ್ನು ಹೊಂದಿದೆ. ಥರ್ಮೋಕೋಲ್, ಪಾಲಿಸ್ಟಿರಿನ್ ಹೊದಿಕೆಗಳು ಮೆತ್ತನೆಯ ಹೊದಿಕೆಯಂತೆ ಮಾರ್ಪಟ್ಟು ತಲೆ ಬುರುಡೆಯನ್ನು ಸೀಳುವ ಇಲ್ಲವೆ ಮಿದುಳಿಗೆ ಗಾಯವಾಗುವ ಸಂಭವಗಳು ಕಡಿಮೆಯಾಗುತ್ತದೆ.

ಹೆಲ್ಮೆಟ್‌ಗಳನ್ನು ಧರಿಸುವುದರಿಂದ ಆಗುವ ಪ್ರಯೋಜನಗಳು ಈ ಕೆಳಕಂಡಂತಿವೆ:

1) ಶೇ. 30 ರಿಂದ ಶೇ. 40 ಸಾವಿನ ಪ್ರಮಾಣದಲ್ಲಿ ಇಳಿಮುಖ.
2) ಶೇ. 30 ತಲೆಗೆ ತೀವ್ರ ಪೆಟ್ಟಾಗುವಲ್ಲಿ ಇಳಿಮುಖ.
3) ಮಿದುಳಿಗೆ ಹಾನಿಯಾಗುವ ಪ್ರಮಾಣದಲ್ಲಿ ಇಳಿಮುಖ.
4) ನರಗಳಿಗೆ ಹಾನಿಯಾಗುವ ಪ್ರಮಾಣದಲ್ಲಿ ಇಳಿಮುಖ.
5) ಆಸ್ಪತ್ರೆಯಲ್ಲಿ ವೈದ್ಯೋಪಚಾರ ಪಡೆಯುವ ಸಮಯದ ಇಳಿಮುಖ.
6) ಕೆಲಸ, ಶಾಲೆ ಮತ್ತು ಕಾಲೇಜಿಗೆ ಗೈರು ಹಾಜರಿ ಅವಧಿಯಲ್ಲಿ ಇಳಿಮುಖ.

7) ಹೆಲ್ಮೆಟ್‌ನ ಮುಂಭಾಗದ ಗಾಜಿನ ಮೊಗವಾಡವು ಧೂಳು, ಹೊಗೆ, ಕ್ರಿಮಿಕೀಟಗಳಿಂದ ಯಾವುದೇ ಹಾನಿಯಾಗದಂತೆ ಕಣ್ಣನ್ನು ಸಂರಕ್ಷಿಸಬಲ್ಲುದು.

8) ದ್ವಿಚಕ್ರ ವಾಹನಗಳ ಚಾಲಕರ ಸುರಕ್ಷತೆಯ ದೃಷ್ಟಿಯಿಂದ ಹೆಲ್ಮೆಟ್‌ಗಳನ್ನು ಧರಿಸುವುದು ಕಡ್ಡಾಯ ಇರಬೇಕು.

ಹೆಲ್ಮೆಟ್ ಧರಿಸುವುದನ್ನು ಕಡ್ಡಾಯವಾಗಿ ಜಾರಿಗೆ ತರುವ ಮೊದಲು ಈ ಕೆಳಕಂಡ ವಿಷಯಗಳನ್ನು ಪರಿಗಣಿಸಲಾಗಿರುತ್ತದೆ.

1) ಕರ್ನಾಟಕದಲ್ಲಿ 1991ರಲ್ಲಿ 4079 ಮಂದಿ ರಸ್ತೆ ದುರಂತದಲ್ಲಿ ಅಸು ನೀಗಿದ್ದಾರೆ.

2) ದ್ವಿಚಕ್ರ ವಾಹನ ಚಾಲಕರು ಮತ್ತು ಹಿಂಬದಿ ಸವಾರರು ಶೇ. 30 ರಿಂದ 40ರ ವರೆಗೆ ರಸ್ತೆ ದುರಂತಗಳಲ್ಲಿ ಸಿಲುಕಿದ್ದಾರೆ.

3) ಪ್ರತಿ ತಿಂಗಳು 60-80 ದ್ವಿಚಕ್ರ ವಾಹನ ಚಾಲಕರು:ಸವಾರರು ತಲೆಗೆ ತೀವ್ರ ಪೆಟ್ಟಿಗೀಡಾಗಿದ್ದಾರೆ.

4) ಹೆಲ್ಮೆಟ್ ಬಳಸದೆ ಚಾಲಕರು:ಸವಾರರಲ್ಲಿ ತಲೆಗೆ ತೀವ್ರ ಪೆಟ್ಟಾಗುವ ಸಾಧ್ಯತೆ ದುಪ್ಪಟ್ಟಾಗಿರುತ್ತದೆ.

5) ಬೆಂಗಳೂರಿನಲ್ಲಿ 5.25 ಲಕ್ಷ ದ್ವಿಚಕ್ರವಾಹನ ಚಾಲಕರಿದ್ದಾರೆ.

6) ಕಾರು ಮತ್ತು ಭಾರಿ ವಾಹನಗಳಲ್ಲಿ ಸಂಚರಿಸುವವರಿಗಿಂತ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವವರಿಗೆ ಅಪಘಾತಗಳು ಸಂಭವಿಸುವುದು ಹೆಚ್ಚು.

7) 1992ನೇ ಸಾಲಿನಲ್ಲಿ ಸಂಭವಿಸಿದ 575 ಅಪಘಾತ ಪ್ರಕರಣಗಳಲ್ಲಿ ಶೇ.61ರಷ್ಟು ಸಾವುಗಳು ತಲೆಗೆ ಪೆಟ್ಟಾದ್ದರಿಂದ ಉಂಟಾಗಿರುತ್ತವೆ. 1991-92ರಲ್ಲಿ 1784 ವ್ಯಕ್ತಿಗಳ ತಲೆಗೆ ಗಾಯಗಳಾಗಿರುತ್ತವೆ. ಶಿರಸ್ತ್ರಾಣ ಧರಿಸುವುದರಿಂದ ಶೇ. 30 ಭಾಗ ತಲೆಗೆ ಪೆಟ್ಟಾಗುವುದನ್ನು ಹಾಗೂ ಶೇ. 40 ಭಾಗದಷ್ಟು ಸಾವುಗಳನ್ನು ಕಡಿಮೆ ಮಾಡಬಹುದು.

ಪ್ರತಿ ಮಾಹೆ 140ರಿಂದ 180 ದ್ವಿಚಕ್ರ ವಾಹನಗಳು ಅಪಘಾತಕ್ಕೀಡಾಗುತ್ತವೆ. ಅದರಲ್ಲಿ 8 ರಿಂದ 10 ಸಾವುಗಳು ಸಂಭವಿಸುತ್ತವೆ. ಇದರಲ್ಲಿ 10 ರಿಂದ 30 ಚಿಂತಾಜನಕ ರೀತಿಯಲ್ಲಿ ತಲೆಗೆ ಪೆಟ್ಟಾಗಿತು ಮತ್ತು 40 ರಿಂದ 50 ಸಣ್ಣ ಪುಟ್ಟ ಗಾಯಗಳಾಗಿರುತ್ತವೆ. ದ್ವಿಚಕ್ರ ವಾಹನಗಳ ಸವಾರರ ಪೈಕಿ ಹೆಲ್ಮೆಟ್ ಧರಿಸಿದವರು ಶೇ. 6.8 ಮತ್ತು ಧರಿಸದವರು ಶೇ. 13.5 ಮಂದಿ ತಲೆಗೆ ಉಂಟಾದ ತೀವ್ರ ಪೆಟ್ಟಿನಿಂದ ಸಾವಿಗೀಡಾಗುತ್ತಾರೆ. ಈ ಸಾವುಗಳಲ್ಲಿ ಶಿರಸ್ತ್ರಾಣ ಧರಿಸಿದವರ ಸಾವಿನ ಸಂಖ್ಯೆ ಶೇ.50 ಕ್ಕಿಂತ ಕಡಿಮೆ ಇರುತ್ತವೆ. ಶಿರಸ್ತ್ರಾಣ ಧರಿಸಿದ ಸವಾರರಿಗೆ ಹೋಲಿಸಿದಾಗ ಒಂದುವರೆ ಪಟ್ಟು ಗಾಯದ ತೀವ್ರತೆ ಶಿರಸ್ತ್ರಾಣ ಧರಿಸದ ಸವಾರರಲ್ಲಿ ಕಂಡುಬರುತ್ತದೆ.

ಜೂನ್ 1993ರಲ್ಲಿ ಬೆಂಗಳೂರು ನಿಮಾನ್ಸ್‌ನಲ್ಲಿ ಸಭೆಯನ್ನು ಕರೆಯಲಾಗಿದ್ದಿತು. ಇತರ ವಿಷಯಗಳನ್ನು ಒಳಗೊಂಡಂತೆ, ಶಿರಸ್ತ್ರಾಣವನ್ನು ಪುನರ್ ಪರಿಶೀಲಿಸಲು ನಿಮಾನ್ಸ್ ವೈದ್ಯಾಧಿಕಾರಿಗಳು ನಿರ್ಣಯ ಮಾಡಿರುತ್ತಾರೆ. ಕೆಲವು ಸಾರ್ವಜನಿಕರು ಕೂಡ ಹೆಲ್ಮೆಟ್‌ಗಳನ್ನು ಧರಿಸುವುದನ್ನು ಕಡ್ಡಾಯಗೊಳಿಸಲು ವಿನಂತಿಸಿರುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಆಟ್ಟೂರ್:- ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವಪೂರ್ಣವಾದಂತಹ ವಿಷಯವನ್ನು ಗಮನ ಸೆಳೆಯುವ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದಕ್ಕೆ ಸಾರಿಗೆ ಸಚಿವರು ಉತ್ತರ ಕೊಡಬೇಕಾಗಿತ್ತು. ಸಾರಿಗೆ ಸಚಿವರು ಇದ್ದರೂ ಸಹ ಉತ್ತರ ಕೊಡುತ್ತಾ ಇಲ್ಲ. ಇವತ್ತು ನಾನು ಇಡೀ ಶಾಸಕಾಂಗ ಪಕ್ಷದ ಸದಸ್ಯರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳ ಮತ್ತು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಮಾನ್ಯಮಂತ್ರಿಗಳು ಉತ್ತರವನ್ನು ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಂತೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ ಅಷ್ಟೆ; ನನ್ನ ಗಮನ ಸೆಳೆಯುವ ಸೂಚನೆಗೆ ಉದ್ದನೆಯ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಹೆಲ್ಮೆಟ್ ಹಾಕುವುದರಿಂದ ಆಗುವ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ನಾನು ಕೇಳುತ್ತಿಲ್ಲ. ಸಾಮಾನ್ಯವಾಗಿ 1991ನೇ ಇಸವಿಯಲ್ಲಿ ಇದನ್ನು ಜಾರಿಗೆ ತಂದ ಮೇಲೆ ಮತ್ತೆ ಏಕೆ ಅದನ್ನು ರದ್ದುಪಡಿಸಿದಿರಿ? 1993ನೇ ಇಸವಿಯಲ್ಲಿ ಮತ್ತೆ ಜಾರಿಗೆ ತರುತ್ತಿದ್ದೀರಿ? ಸಾಕಷ್ಟು ಸಂಘಸಂಸ್ಥೆಗಳು ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಏನು ಮಾಡುತ್ತಿದ್ದಾರೆ, ಇದರಿಂದ ವಾಹನ ಚಾಲಕರಿಗೆ ಪೋಲೀಸ್ ಪೇದೆಗಳಿಂದ ಹಾಗೂ ಹಲವಾರು ಕಡೆಯಿಂದ ವಾಹನ ಚಾಲಕರಿಗೆ ತೊಂದರೆ ಆಗುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ, ಏನೆಂದರೆ, ಆಂಧ್ರಪ್ರದೇಶದಲ್ಲಿ ಇಂತಹ ಒಂದು ಕಾನೂನನ್ನು ರದ್ದುಪಡಿಸಿದ್ದಾರೆ. ಇದಕ್ಕೆ ಎಲ್ಲಾ ಕಡೆ ವಿರೋಧ ಇದೆ. ತಮ್ಮ ಕಾಂಗ್ರೆಸ್ಸ್ ಶಾಸಕಾಂಗ ಪಕ್ಷದಲ್ಲಿ ಹಲವಾರು ಸಭೆಗಳಲ್ಲಿ ಕೂಡ ಇದನ್ನು ದಯಮಾಡಿ ಮುಂದಕ್ಕೆ ಹಾಕಬೇಕು ಎನ್ನುವಬಗ್ಗೆ ಕೇಳಿದ್ದರೂ ಕೂಡ ತಾವು ಕಡ್ಡಾಯವಾದಂತಹ ಕಾನೂನು ತರುತ್ತಿದ್ದೀರಿ. ಇದು ಬಹಳ ದುರದೃಷ್ಟಕರವಾದಂತಹ ಸಂಗತಿ. ತಾವು ಈ ಒಂದು ಕಾನೂನು ತರುವ ಉದ್ದೇಶ ಏನು ಇದೆ? ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ತಾವು ಕಾನೂನು ತರುತ್ತಿದ್ದೀರಿ. ಆದರೆ ಇದು ಜನಸಾಮಾನ್ಯರಿಗೆ ಅನುಕೂಲವಾಗುತ್ತಿಲ್ಲ ಇದರಿಂದ ಜನಸಾಮಾನ್ಯರಿಗೆ ತೊಂದರೆ ಆಗುತ್ತಿದೆ. ಆದ್ದರಿಂದ ತಾವು ಹೆಲ್ಮೆಟ್ ಧರಿಸುವುದು ಕಡ್ಡಾಯ ಎಂದು ಏನು ಇದೆ, ಇದನ್ನು ರದ್ದುಪಡಿಸಬೇಕು ಎಂದು ನಾನು ಕೇಳಲಿಕ್ಕೆ ಬಯಸುತ್ತಿದ್ದೇನೆ. ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಕೂಡ ಸ್ವಇಚ್ಛೆಯಿಂದ ದ್ವಿಚಕ್ರವಾಹನ ಚಾಲಕರು ಧರಿಸಿಕೊಳ್ಳಲಿ ಎಂದು ಮಾಡಿದ್ದಾರೆ. ಬೇರೆ ರಾಜ್ಯಗಳಲ್ಲಿ ಕೂಡ ಇದು ಕಡ್ಡಾಯ ಇಲ್ಲ, ನಮ್ಮ ರಾಜ್ಯದಲ್ಲೂ ಕೂಡ ಮೊದಲು ತೆಗೆದು ಹಾಕಿದ್ದಿರಿ. ಈಗ ಮತ್ತೆ ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರಿಂದ ಜನಸಾಮಾನ್ಯರಿಗೆ ಬಹಳಷ್ಟು ತೊಂದರೆ ಆಗುತ್ತಿದೆ. ಎಲ್ಲಾ ಜನರು ಪೋಲೀಸರದ್ದು ತುಂಬಾ ಕಾಟ ಆಗಿದೆ ಎಂದು ಹೇಳುತ್ತಾರೆ. ಹೆಲ್ಮೆಟ್ ರೇಟ್ ಕೂಡ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಗೆ ಆಗಿಬಿಟ್ಟಿದೆ. ಐ ಎಸ್ ಐ ಮಾರ್ಕಿನ ಹೆಲ್ಮೆಟ್‌ಗಳ ಬೆಲೆ ಬಹಳ ಜಾಸ್ತಿಯಾಗಿದೆ. ಬೇರೆ ಕಡೆ ಜನ ಕೂಡ ಏನು ಮಾತನಾಡುತ್ತಿದ್ದಾರೆ ಅಂದರೆ ಐ ಎಸ್ ಐ ಮಾರ್ಕಿನ ಹೆಲ್ಮೆಟ್ ಕಂಪನಿಗೂ ಮತ್ತು ಮಂತ್ರಿಗಳಿಗೂ ಏನೋ ಸಂಬಂಧ ಇದೆ, ಏನೋ ವ್ಯವಹಾರ ಇದೆ ಎನ್ನುವ ರೀತಿಯಲ್ಲಿ ಸಂಶಯಾತ್ಮಕವಾದ ದೃಷ್ಟಿಯಿಂದ ಸರ್ಕಾರದ ಕಡೆ ನೋಡುತ್ತಿದ್ದಾರೆ. ಎಲ್ಲಾ ಸಂಘಸಂಸ್ಥೆಗಳವರೂ ಕೂಡ ಒತ್ತಾಯ ಮಾಡಿದ್ದಾರೆ. ಶಾಸಕರು ಕೂಡ ಒತ್ತಾಯ ಮಾಡಿದ್ದಾರೆ. ತಮ್ಮ ಶಾಸಕಾಂಗ ಪಕ್ಷದಲ್ಲಿ ಕೂಡ ಒತ್ತಾಯ ಮಾಡಿದ್ದಾರೆ. ಆದ್ದರಿಂದ ತಾವು ದಯಮಾಡಿ ಹೆಲ್ಮೆಟ್ ಧರಿಸುವುದು ಏನು ಇದೆ, ಇದನ್ನು ರದ್ದುಪಡಿಸಬೇಕೆಂದು ನಾನು ತಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಎ ಚಿನ್ನಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ರಿಪೋರ್ಟ್‌ನಲ್ಲಿ ಹೇಳಿದ ಹಾಗೆ ಹೆಲ್ಮೆಟ್ ಹಾಕದಿದ್ದರೆ ಎಷ್ಟು ಜನ ಸತ್ತಿದ್ದಾರೆ ಎಷ್ಟು ಜನ ನಿಮ್ಮಾನ್ಸ್‌ಗೆ ಸೇರಿದ್ದಾರೆ, ಎಷ್ಟು ಜನರಿಗೆ ಹಿಂದೆ ಕುಳಿತುಕೊಂಡವರಿಗೆ ಗಾಯ ಆಗಿದೆ, ಎಷ್ಟು ಜನ ಗಾಯಗಳಿಂದ ಕಷ್ಟಪಡುತ್ತಿದ್ದಾರೆ, ಹೆಲ್ಮೆಟ್ ಹಾಕದವರು ಹೆಲ್ಮೆಟ್ ಹಾಕುವುದರಿಂದ ಎಷ್ಟು ಪರ್ಸೆಂಟೇಜ್ ಕಡಿಮೆ ಆಗಿದೆ ಎಷ್ಟು ಜನರ ಜೀವ ಉಳಿದಿದೆ ಎಷ್ಟು ಜನರಿಗೆ ಗಾಯ ಕಡಿಮೆ ಆಗಿದೆ, ಅದರಿಂದ ಎಷ್ಟು ಜನರಿಗೆ ತೊಂದರೆ ಆಗಿದೆ, ಇದನ್ನೆಲ್ಲಾ ನಾವು ನೋಡಬೇಕಾಗಿದೆ. ಕೆಲವು ಸಾರಿ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ಆದರೆ ಜೀವ ತೊಂದರೆಗಿಂತ ಬಹಳಷ್ಟು ಪ್ರಾಮುಖ್ಯವಾದುದು. ಒಬ್ಬನ ಜೀವ ಉಳಿದರೆ ಅದರಿಂದ ಎಷ್ಟು ಅನಾಹುತಗಳನ್ನು ತಪ್ಪಿಸಬಹುದೆಂಬುದನ್ನು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾವು ನೋಡಿದಾಗ ಹೆಲ್ಮೆಟ್ ಇರತಕ್ಕಂಥಾದ್ದು ಒಳ್ಳೆಯದು ಅಂತ ನಮ್ಮ ಅಭಿಪ್ರಾಯ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲು ನಾನು ಅವರಿಗೆ ಹೇಳುತ್ತೇನೆ.

ದ.ಅ ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲಾ ಗೌರವ ಶಿಕ್ಷಕರುಗಳನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಕರಿಯಣ್ಣ(ಹೊಳೆ ಹೊನ್ನೂರು):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾಗೌರವ ಶಿಕ್ಷಕರುಗಳನ್ನು ಖಾಯಂಗೊಳಿಸಲು ಕೋರಿ ಅಮರಣಾಂತರ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತ್‌ಗಳು 3,837 ಗೌರವ ಧನ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು ದಿನಾಂಕ 10-7-91ರ ಆದೇಶದಲ್ಲಿ ಸಾಮಾನ್ಯ ನೇಮಕಾತಿಯನ್ನು ಮುಂದುವರಿಸಲು ಹಾಗೂ ಈ ಗೌರವ ಧನ ಶಿಕ್ಷಕರಿಗೂ ಸಹ ಆದರಲ್ಲಿ ಅವಕಾಶ ಕಲ್ಪಿಸಲು ನಿರ್ದೇಶನ ನೀಡಿದೆ. ಈ ಶಿಕ್ಷಕರು ಸಲ್ಲಿಸಿದ ಸೇವಾ ಅವಧಿಗೆ ಸೂಕ್ತ ಮಾನ್ಯತೆ ನೀಡುವ ಒಂದು ತತ್ವವನ್ನು ಸಹ ಅಳವಡಿಸಲು ಸೂಚನೆ ನೀಡಿದ್ದಿತು. ನ್ಯಾಯಾಲಯದ ಈ ಆದೇಶದನ್ವಯ ಸದರಿ ಶಿಕ್ಷಕರು ಪೂರ್ತಿಗೊಳಿಸಿದ ಅವರ ಪ್ರತಿಯೊಂದು ಸೇವಾ ವರ್ಷಕ್ಕೆ ಶೇಕಡ 0.50 ಕೃಪಾಂಕ ನೀಡುವುದು ಸೂಕ್ತವೆಂದು ಭಾವಿಸಿ ಪ್ರಾಥಮಿಕ ಶಿಕ್ಷಕರ ವಿಶೇಷ ನೇಮಕಾತಿ ನಿಯಮಾವಳಿ ಹಾಗೂ ಸಾಮಾನ್ಯ ನೇಮಕಾತಿ ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಅವರು ಜಿಲ್ಲಾ ಪಂಚಾಯತ್‌ಗಳಲ್ಲಿ ಸಲ್ಲಿಸಿದ ಸೇವೆಯ ಪ್ರತಿ ವರ್ಷಕ್ಕೆ ಶೇಕಡ 0.50 ಕೃಪಾಂಕ ನೀಡುವ ಅವಕಾಶ ಕಲ್ಪಿಸಿದೆ.

ಸಚಿವ ಸಂಪುಟವು ಇತ್ತೀಚೆಗೆ ಪ್ರಾಥಮಿಕ ಶಿಕ್ಷಕರ ಸಾಮಾನ್ಯ ನೇಮಕಾತಿ ನಿಯಮಾವಳಿಗಳಿಗೂ ಸಹ ಇಂತಹ ತಿದ್ದುಪಡಿ ನೀಡಿ ಶೇಕಡ 0.50 ರಷ್ಟು ಕೃಪಾಂಕ ನೀಡುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಈ ರೀತಿ ನೀಡುವ ಕೃಪಾಂಕವು ಗರಿಷ್ಠ 1.5ಕ್ಕೆ ಮಿತಿಗೊಳಿಸಲು ನಿರ್ಧರಿಸಿದೆ.

ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯವು ಈ ಶಿಕ್ಷಕರ ಸೇವಾ ಅವಧಿಯನ್ನು ಗಮನಕ್ಕೆ ತೆಗೆದುಕೊಂಡು ಯಾವುದೇ ಮಿತಿಗೊಳಪಡಿಸದೆ ಕೃಪಾಂಕದ ತತ್ವವನ್ನು ಅಳವಡಿಸುವಂತೆ ಸೂಚಿಸಿರುವ